**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**CC No.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಅಶೋಕ ಸಮಾಳದ | ಪಿಡಬ್ಲ್ಯೂ | 13 |
| ತಂದೆ ಹೆಸರು | : | ಲೋಕಪ್ಪ | ಸಿ ಡಬ್ಲ್ಯೂ | |
| ವಯಸ್ಸು | : | 66 ವರ್ಷ | | |
| ಉದ್ಯೋಗ | : | ನಿವೃತ್ತ ಆರ್ ಟಿ ಓ | | |
| ವಾಸ ಸ್ಥಳ | : | ವಿಜಯಪುರ | | |

**ದಿನಾಂಕ: 10.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು 2014 ರಿಂದ 2016 ರವರೆಗೆ ನಾನು ಹಾವೇರಿಯ ಆರ್ ಟಿ ಓ ಕಚೇರಿಯಲ್ಲಿ ಮೋಟಾರ ವಾಹನ ನೀರಿಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ. .

ದಿನಾಂಕ 11.12.2015 ರಂದು ಪಿ ಎಸ್ ಐ ಆಡೂರು ರವರ ಮನವಿ ಮೇರೆಗೆ ಅಪಘಾತಕ್ಕೆ ಒಳಗಾದ ಎರಡು ಮೋಟರ್ ಸೈಕಲ್ ಕೆ ಎ 27/ಎಸ್–1822 ಮತ್ತು ಕೆ ಎ 27/ಈ ಈ–5882 ನೇದ್ದವುಗಳನ್ನು ಆಡೂರು ಪೋಲಿಸ್ ಠಾಣಾ ಆವರಣದಲ್ಲಿ ಪರಿಶೀಲಿಸಿರುತ್ತೇನೆ. ಸದರಿ ಪರಿಶೀಲನೆಯಿಂದ ಕೆ ಎ–27/ಎಸ್–1822 ವಾಹನಕ್ಕೆ ಅದರ ಮುಂಭಾಗದ ಬಲಭಾಗದ ಬಂಪರ್ ಬೆಂಡಾಗಿತ್ತು, ಮುಂಭಾಗದ ಬಲಭಾಗದ ಮೀರರ್ ಜಖಂ ಆಗಿತ್ತು ಅದರ ಬ್ರೆಕ್ ಪೆಡಲ್ ಜಖಂ ಗೊಂಡಿತ್ತು, ಮುಂಭಾಗದ ಎರಡು ಇಂಡಿಕೇಟರ್ ಗಳು ಜಖಂ ಗೊಂಡಿದ್ದವು ಮತ್ತು ಹಾಗೂ ಅದರ ಉಳಿದ ಭಾಗಳು ಸುಸ್ಥಿಯಲ್ಲಿದ್ದವು. ಅದೇ ರೀತಿ ಇನ್ನೊಂದು ವಾಹನ ಕೆ ಎ 27 ಈಈ–5882 ನೇದ್ದರ ಮುಂಭಾಗದ ಎರಡು ಇಂಡಿಕೇಟರಗಳು ಒಡೆದಿದ್ದವು, ಬ್ರೆಕ್ ಪೆಡಲ್ ಬೆಂಡಾಗಿತತು ಮತ್ತು ಜಖಂಗೊಂಡಿತ್ತು, ಮುಂಭಾಗದ ಬಲಬದಿಯ ಬಂಪರ್ ಬೆಂಡಾಗಿತ್ತು, ಹೆಡ್ ಲೈಟ್ ನ ಡೂಮ್ ಸ್ಕ್ರಾಚ್ ಆಗಿತ್ತು. ಸದರಿ ವಾಹನಗಳ ಬ್ರೇಕ್ ಪರಿಶೀಲಿಸಲಾಗಿ ಅದು ಸುಸ್ಥಿಯಲ್ಲಿತ್ತು. ಸದರಿ ಅಪಘಾತ ಸದರಿ ವಾಹನಗಳ ತಾಂತ್ರಿಕ ದೋಷದಿಂದ ಆಗಿಲ್ಲ ಎಂದು ಕಂಡು ಬಂದಿರುತ್ತದೆ. ಆ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸದರಿ ಎಂ ವಿ ವರದಿಯನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಸಾಕ್ಷಿಯ ಸಹಿಯನ್ನು ನಿಪಿ15(ಎ) ಎಂದು ಗುರುತಿಲಸಲಾಯಿತು.

**:ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರೋಪಿ ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಮಂಜಸವಾದ ಕಾರಣ ಇಲ್ಲದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್